# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 422 |
| ಸದಸ್ಯರ ಹೆಸರು | : ಡಾ:ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 12.12.2024 |
| ಉತ್ತರಿಸುವ ಸಚಿವರು | : ಮಾನ್ಯ ಉಪ ಮುಖ್ಯಮಂತ್ರಿಗಳು. |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕಲಬುರಗಿ ಜಿಲ್ಲೆಯಲ್ಲಿರುವ ನಾರಾಯಣಪುರ ಜಲಾಶಯದಿಂದ ಕಾಲುವೆಗಳಿಗೆ ನೀರು ಹರಿಸುವುದನ್ನು ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದಿನಾಂಕ 16.07.2024 ರಂದು ಜರುಗಿದ ಮುಂಗಾರು ಹಂಗಾಮು ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ, ಆಲಮಟ್ಟಿ ಹಾಗೂ ನಾರಾಯಣಪೂರ ಜಲಾಶಯಗಳಲ್ಲಿ ಒಳಹರಿವು ಇರುವವರೆಗೂ ಸತತವಾಗಿ ಬಂದ್ ಮಾಡದೇ ನೀರು ಹರಿಸಲು ನಿರ್ಧರಿಸಿದಂತೆ ದಿನಾಂಕ:17.07.2024 ರಿಂದ ದಿನಾಂಕ 13.11.2024 ರ ವರೆಗೆ ನಾರಾಯಣಪೂರ ಜಲಾಶಯದ ಕಾಲುವೆ ಜಾಲಗಳಿಗೆ ಸತತವಾಗಿ ನೀರು ಹರಿಸಲಾಗಿದೆ.<br><br>ನೀರಾವರಿ ಸಲಹಾ ಸಮಿತಿ ಸಭೆಯ ತೀರ್ಮಾನದಂತೆ ಆಲಮಟ್ಟಿ ಜಲಾಶಯದ ಅಧೀನದಲ್ಲಿ ಬರುವ ಹಂತ 1 ಮತ್ತು 2 ಕಾಲುವೆಗಳಿಗೆ ಹಾಗೂ ನಾರಾಯಣಪೂರ ಎಡದಂಡೆ ಕಾಲುವೆ ಹಾಗೂ ಬಲದಂಡೆ ಕಾಲುವೆಗಳಿಗೆ ವಾರಾಬಂದಿ (on & off method) ಅನುಸರಿಸಿ ಬೆಳೆಗಳಿಗಾಗಿ ನೀರು ಹರಿಸಲಾಗಿದೆ. |
| ಆ) | ಮಳೆಗಾಲ ಮುಗಿದ ನಂತರ ಬೆಳೆಗಳಿಗೆ ನೀರಿನ ಅಗತ್ಯವಿದ್ದು, ವಾರಾಬಂದಿ ಮಾಡುವುದರಿಂದ ರೈತರಿಗೆ ಯಾವುದೇ ಪ್ರಯೋಜನ ಆಗದೆ ಕಾಲುವೆಯ ಕೊನೆಯ ಭಾಗದ ರೈತರಿಗೆ ನೀರು ಸಿಗದಿರುವುದನ್ನು ಸರ್ಕಾರ ಗಮನಿಸಿದೆಯೇ; ಬೇಸಿಗೆಯ ಬೆಳೆಗಳ ಬಿತ್ತನೆಗೆ ಮತ್ತು ಹಾಲಿ ಇರುವ ಬೆಳೆಗಳಿಗೆ ನೀರು ಹರಿಸುವುದು ರೈತರ ಹಿತದೃಷ್ಟಿಯಿಂದ ಅಗತ್ಯವಿದ್ದು, ನೀರು ಹರಿಸುವುದನ್ನು ಸರ್ಕಾರ ಮುಂದುವರೆಸಲು ಕ್ರಮ ಕೈಗೊಳ್ಳುವುದೆ? (ವಿವರ ನೀಡುವುದು) | ಮಳೆಗಾಲ ಮುಗಿದ ನಂತರ ದಿನಾಂಕ:16.11.2024 ರಂದು ನಡೆದ ಕೃಷ್ಣಾ ಮೇಲ್ದಂಡೆ ಯೋಜನೆಯ ನೀರಾವರಿ ಸಲಹಾ ಸಮಿತಿ ಸಭೆಯ ತೀರ್ಮಾನದಂತೆ, ಆಲಮಟ್ಟಿ ಹಾಗೂ ನಾರಾಯಣಪೂರ ಜಲಾಶಗಳಲ್ಲಿ ಲಭ್ಯವಿರುವ 115.11 ಟಿ.ಎಮ್.ಸಿ ನೀರಿನ ಸಂಗ್ರಹದಲ್ಲಿ 44.00 ಟಿ.ಎಮ್.ಸಿ ನೀರನ್ನು ಬೇಸಿಗೆ ಕಾಲದಲ್ಲಿ ಬೇಕಾಗುವ ಅಗತ್ಯ ಬಳಕೆಗಳಿಗೆ ಹಾಗೂ 6.00 ಟಿ.ಎಮ್.ಸಿ ನೀರನ್ನು ದ್ವಿಋತು ಬೆಳೆಗಳಿಗೆ ಕಾಯ್ದಿರಿಸಿದ್ದು, ಈಗಾಗಲೇ ದ್ವಿಋತು ಬೆಳೆಗಳಿಗೆ ನೀರು ಹರಿಸಲಾಗಿರುತ್ತದೆ.<br><br>ಕಾಲುವೆ ಜಾಲಗಳ ಕೊನೆ ಭಾಗದವರೆಗೂ ನೀರು ಹರಿಸಲು ದಿನಾಂಕ: 09.12.2024 ರಿಂದ ಮುಖ್ಯ ಕಾಲುವೆಯಡಿ 14 ದಿನಗಳ ಚಾಲೂ ಹಾಗೂ 10 ದಿನಗಳ ಬಂದ್ ಪದ್ಧತಿಯನ್ನು ಅನುಸರಿಸಿ ಪ್ರತಿ ದಿನ 1.00 ಟಿ.ಎಂ.ಸಿ ನೀರನ್ನು ಬಳಸಿ ದಿನಾಂಕ:23.03.2025 ವರೆಗೆ 65 ದಿನಗಳಿಗೆ, ನೀರಾವರಿಗೆ ಲಭ್ಯವಿರುವ 65 ಟಿ.ಎಂ.ಸಿ. ನೀರನ್ನು ಹರಿಸಲು ತೀರ್ಮಾನಿಸಲಾಗಿದ್ದು, ಅದರಂತೆ ಕ್ರಮ ಜರುಗಿಸಲಾಗುವುದು. |

ಸಂಖ್ಯೆ:ಜಸಂಇ 85 ಡಬ್ಲ್ಯೂಬಿಎಂ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು